ತಿಂಗಳೊಳಗಾಗಿ ಮಾಡುವ ಯೋಚನೆ ಇದೆ. ಅಂತಹ ಸಂದರ್ಭದಲ್ಲಿ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿಗೆ ಕೂಡಲೆ ತುಂಬುವ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು —ಶ್ರೀದ್ಯಾವಿರಪ್ಪ (ಗೈರು ಹಾಜರಿ)

ಶ್ರೀ ರಂಗದೇವರಾಯಲು (ಮುಂದೆ ಹೋಗಿದೆ)

ಶ್ರೀ ಬಿ ಬಸವಲಿಂಗಪ್ಪ (ಮುಂದೆ ಹೋಗಿದೆ)

ಶ್ರೀ ಆರ್. ರೋಷನ್ ಬೇಗ್ (ಗೈರು ಹಾಜರು)

ಶ್ರೀ ಎಂ. ಎಸ್. ಕೃಷ್ಣನ್ (ಗೈರು ಹಾಜರು)

ಕೃಷಿ ಇಲಾಖೆಯಲ್ಲಿನ ವಿವಿಧ ರೀತಿಯ ವಾಹನಗಳ ಬಗ್ಗೆ.

೧೯೦೮. ಶ್ರೀ ಮಂಹಮದ್ ಮೋಹಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆಯಲ್ಲಿ ೩೧-೧-೧೯೮೬ರಲ್ಲಿ ಇರುವ ಒಟ್ಟು ವಿವಿಧ ರೀತಿಯ ವಾಹನಗಳ ಸಂಖ್ಯೆ ಎಷ್ಟು ?

ಆ) ಕೃಷಿ ಇಲಾಖೆಯಲ್ಲಿ ೩೧-೧-೧೯೮೬ರಲ್ಲಿ ವಿವಿಧ ವರ್ಗಗಳಲ್ಲಿ ಇರುವ ಒಟ್ಟು ನೌಕರರ ಸಂಖ್ಯೆ ಎಷ್ಟು ?

ಇ) ವಿಶ್ವಬ್ಯಾಂಕ್ ಯೋಜನೆಯ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ ಒಂದನೇ ಹಂತಕ್ಕೆ ೩೧-೧-೧೯೮೬ರವರೆಗೆ ಮಂಜೂರು ನೀಡಿದ ಹಾಗೂ ಖರ್ಚು ಮಾಡಿದ ಒಟ್ಟು ಹಣವೆಷ್ಟು ?

ಈ) ವಿಶ್ವಬ್ಯಾಂಕ್ ಯೋಜನೆಯ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ ಎರಡನೇ ಹಂತಕ್ಕೆ ನಿಗದಿ ಮಾಡಿದ ಹಣವೆಷ್ಟು?

ಉ) ಹಣ ಖರ್ಚು ಮಾಡಿದ ಹಾಗೂ ಖರ್ಚು ಮಾಡುವ ವಿವಿಧ ರೀತಿಯ ಕಾರ್ಯಗಳಾವುವು ?

ಶ್ರೀ ಎಮ್. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ಅ)

೧)	ಮೊಟಡಾರ ವ್ಯಾನ್ (ಡೀಸಲ್)	೧೦
೨)	ಮಿನಿಬಸ್ (ಡೀಸಲ್)	೧೧
೩)	ಕಾರು (ಪೆಟ್ರೋಲ್)	೧೪
೪)	ಜೀಪು (ಪೆಟ್ರೋಲ್)	೨೪೬
೫)	ಜೀಪು (ಡೀಸಲ್)	೧೯೦
	ಒಟ್ಟು	೪೭೧

ಆ) ಒಟ್ಟು ನೌಕರರ ಸಂಖ್ಯೆ. ೧೨,೪೪೧

ಎ	ವರ್ಗ	೪೧೮
ಬಿ	,,	೨,೨೧೬
ಸಿ	,,	೮,೦೪೨
ಡಿ	,,	೧,೮೧೫

ಇ) ಒಟ್ಟು ನಿಗದಿಪಡಿಸಿದ ಹಣ ... ರೂ. ೨೦.೫೮ ಕೋಟಿ

ಒಟ್ಟು ಖರ್ಚಾದ ಹಣ ... ರೂ. ೨೮.೧೪ ಕೋಟಿ

ಈ) ರೂ. ೨೫.೦೯ ಕೋಟಿ

ಉ) ವಿವರಗಳನ್ನು ಅನುಬಂಧ—೧ರಲ್ಲಿ ಕೊಡಲಾಗಿದೆ.

STATEMENT—I

STATEMENT SHOWING THE DIFFERENT TYPES AND WORKS FOR WHICH THE AMOUNT IS SPENT AND IS TO BE SPENT UNDER NAEP—II

(Rs. in lakhs).

Sl. No.	Particulars	Dept. of Agri	U. A. S.	Total Project Cost	Allocation for 1985–86		Allocation for 1986–87	
					Deptt.	UAS.	Deptt.	UAS.
1	Incremental staff salaries.	209,500	17.700	227.200	0.10	22.000	28.06	55.00
2	Civil works	639.000	256.000	895.000	—	—	58.33	—
3	Equipments	27.000	8.000	35.400	4,50	—	5.60	—
4	Vehicles	270 000	12.600	282.600	11.60	—	58.00	—
5	Training	62.870	—	62.870	—	—	10.08	—
6	Vehicle operating cost.	216.000	7.000	223.000	11.00	—	26.39	—
7	Office & Field Operation	5.200	2.000	7.200	0 07	—	1.03	—
8	Travelling Allowance	267.850	2.500	270.350	10.40	—	51·71	—
9	Computer operation	2.500	—	2.500	—	—	—	—
10	Field Trials	18.750	—	18.750	—	—	3.75	—
11	Physical and Price contingencies (M&E)	359.249	45.024	404.273	3.30	—	6.75	—
		2078.319	350.824	2429.143	40 57	22.000	250.20	55.00
	Unallocated	80.600	—	80.600		62.57	305.20	
	Grand Total	2158.919	350.824	2509.743				

Till the end of January 1986 an amount of Rs. 1.25 lakhs has been spent.

ಶ್ರೀ ಮಹಮದ್ ಮೊಯಿನುದ್ದೀನ್.—ಮಾನ್ಯ ಅಧ್ಯಕ್ಷರೇ ಇದು ಬಹಳ ಮುಖ್ಯವಾದಂಥ ಪ್ರಶ್ನೆ. ಆದ್ದರಿಂದ ನಾನು ನಾಲ್ಕು ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳಬೇಕಾಗಿರುವುದರಿಂದ ನನಗೆ ಸ್ವಲ್ಪ ಹೆಚ್ಚು ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಈಗ ನ್ಯಾಷನಲ್ ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ಪ್ರೋಗ್ರಾಂ ಅನ್ನು ಇಂಪ್ಲಿಮೆಂಟ್ ಮಾಡುವ ಸಲುವಾಗಿ ತಾವೇನಾದರೂ ಒಂದು ನೀಲಿ ನಕಾಶೆಯನ್ನು ತಯಾರು ಮಾಡಿದ್ದೀರಾ? ಮತ್ರ ಇದಕ್ಕೆ ಒಂದು ವಿಯಾ ಎಂದು ಏನಾದರೂ ನಿಗದಿ ಮಾಡಿದ್ದೀರಾ? ಮತ್ತೆ ಅದೇ ರೀತಿಯಲ್ಲಿ ಎರಡನೇ ಹಂತದ ಪ್ರಾಜೆಕ್ಟ್ ಬಗ್ಗೆ ಏನಾದರೂ ಒಂದು ವಿಯಾ ನಿಗದಿ ಮಾಡಿದ್ದೀರಾ? ಮತ್ರ ಈ ವಿಚಾರದಲ್ಲಿ ಲಿಖಿತ ಮೂಲಕ ಪ್ರೋಗ್ರಾಂ ಏನಾದರೂ ಹಾಕಿಕೊಂಡಿದ್ದೀರಾ ? Have you collected any data and made any evaluation of the programme ? How far this programme is successful? I am asking this, because last year for the first phase Rs. 28 crores have been spent. Spending Rs. 28 crores on agriculture is something fantastic. Is that 28 crores really gone to the field ? Has that evaluation been done ?

ಅಧ್ಯಕ್ಷರು.—ಮಾನ್ಯ ಸದಸ್ಯರು ನೇರವಾಗಿ ಪ್ರಶ್ನೆ ಕೇಳಿದರೆ ಒಳ್ಳೆಯದು

ಶ್ರೀ ಮಹಮದ್ ಮೊಯಿನುದ್ದೀನ್.—ನೇರವಾಗಿಯೇ ಸ್ವಾಮಿ ನಾನು ಪ್ರಶ್ನೆ ಕೇಳುತ್ತಿರುವುದು. ತಾವು ಈ ಎರಡೂ ಕೇಸ್‌ಗಳಲ್ಲಿ ಬ್ರೇಕ್ ಅಪ್ ಫಿಗರ್ಸ್ ಕೊಟ್ಟಿದ್ದೀರಿ. ಅದರಲ್ಲಿ ತಾವು ಖರ್ಚು ಮಾಡಿರುವುದು ಈ ರೀತಿ ಇದೆ. ಸಿಬ್ಬಂದಿ ವರ್ಗಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳು ಮತ್ತು ಬಿಲ್ಡಿಂಗ್‌ಗೆ ಸುಮಾರು ೯ ಕೋಟಿ ರೂಪಾಯಿಗಳು ಹಾಗೂ ವಾಹನಗಳಿಗೆ ೫ ಕೋಟಿ ರೂಪಾಯಿಗಳು ಮತ್ತು ಟಿ.ಎ.ಗೆ ೩ ಕೋಟಿ ರೂಪಾಯಿಗಳು ಫೀಲ್ಡ್ ಟ್ರಯಲ್ಸ್‌ಗೆ ಖರ್ಚು ಮಾಡಿರುವುದು ಕೇವಲ ೧೮ ಲಕ್ಷ ರೂಪಾಯಿಗಳು ಮಾತ್ರ. ಅದೇ ರೀತಿಯಲ್ಲಿ ಸೆಕೆಂಡ್ ಸ್ಟೇಜ್‌ನಲ್ಲಿ ಏನು ಮಾಡಿದ್ದೀರಿ ಎನ್ನುವುದಕ್ಕೆ ನನಗೆ ವಿವರಣೆ ಕೊಡಿ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಬಹಳ ಮುಖ್ಯವಾದಂಥ ವಿಚಾರವನ್ನು ಎತ್ತಿದ್ದಾರೆ. ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ ದಿನಾಂಕ ೧-೧೦-೧೯೮೫ರಿಂದ ಜಾರಿಗೆ ಬಂದಿದ್ದು ಈ ಯೋಜನೆಗೆ ವಿಶ್ವ ಬ್ಯಾಂಕ್‌ನಿಂದ ಸುಮಾರು ೨೫ ಕೋಟಿ ರೂಪಾಯಿಗಳು ಬಂದಿದೆ. ಈ ಯೋಜನಾ ಅನ್ವಯ ನಾವು ಏನೇನು ಸೌಲಭ್ಯಗಳು ಬೇಕೋ ಆ ಎಲ್ಲಾ ಸೌಲಭ್ಯಗಳನ್ನು ಅವರ ಒಂದು ಗೈಡ್‌ಲೈನ್ಸ್ ಪ್ರಕಾರವೇ ಮಾಡಿದ್ದೇವೆ. ಮತ್ತೆ ಎರಡನೇ ಯೋಜನೆಗೆ ಸಂಬಂಧಪಟ್ಟಂತೆ ಒಂದು ನೀಲಿ ನಕಾಶೆಯನ್ನು ತಯಾರು ಮಾಡಿದ್ದೇವೆ. ಅದರಲ್ಲಿ ಸಮಗ್ರವಾದ ವಿವರಗಳನ್ನು ಅಳವಡಿಸಿದ್ದೇವೆ. ಮತ್ತೆ ಈ ದಿವಸ ನನ್ನ ಇಲಾಖೆಯ ಬೇಡಿಕೆಗಳು ಇರುವುದರಿಂದ ಈ ಬಗ್ಗೆ ನಾನು ಸಂಪೂರ್ಣವಾದ ವಿವರಗಳನ್ನು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಕೊಡುತ್ತೇನೆ. ಮತ್ತೆ ಮಾನ್ಯ ಸದಸ್ಯರು ಮಾತನಾಡುತ್ತಾ ವಾಹನಗಳ ಸಂಖ್ಯೆ ಜಾಸ್ತಿಯಾಯಿತು ಎನ್ನುವ ಅಭಿಪ್ರಾಯದಲ್ಲಿ ಮಾತನಾಡಿದ್ದಾರೆ. ನಾವು ವಿಶ್ವಬ್ಯಾಂಕಿನ ಗೈಡ್‌ಲೈನ್ಸ್ ಪ್ರಕಾರ ಕೆಲಸ ಮಾಡಿದ್ದೇವೆ.

ಶ್ರೀ ಮಹಮದ್ ಮೊಯಿನುದ್ದೀನ್.—ಸ್ವಾಮಿ ವಿಶ್ವಬ್ಯಾಂಕಿನವರು ನಮಗೆ ಹಣ ಕೊಟ್ಟಿರುವುದು ಸಾಲದ ರೂಪದಲ್ಲಿಯೋ ಅಥವಾ ಅನುದಾನವೋ?

ಶ್ರೀ ಎಂ. ಪಿ. ಪ್ರಕಾಶ್.—ಸಾಲದ ರೂಪದಲ್ಲಿ ಕೊಟ್ಟಿದ್ದಾರೆ.

ಶ್ರೀ ಮಹಮದ್ ಮೊಯಿನುದ್ದೀನ್.—ಅವರು ಕೊಟ್ಟಿರುವ ಸಾಲದಲ್ಲಿ ೨೭ ಲಕ್ಷ ರೂಪಾಯಿಗಳನ್ನು ಕಡಿಮೆ ಏತಕ್ಕೆ ತೆಗೆದುಕೊಳ್ಳಲಿಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಸ್ವಾಮಿ ನಾವು ಅವರ ಒಂದು ಗೈಡ್‌ಲೈನ್ಸ್ ಅನುಗುಣವಾಗಿ ಕೆಲಸ ಮಾಡಿದರೆ ನಮಗೆ ಹಣ ಕೊಡುವುದು. ಇಲ್ಲದಿದ್ದರೆ ಇಲ್ಲ.

ಪ್ರಶ್ನೆ ಸಂಖ್ಯೆ ೭೦೨(೧೮೪೮)
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)
ಪ್ರಶ್ನೆ ಸಂಖ್ಯೆ. ೭೦೯(೧೭೦೪)
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)
ಪ್ರಶ್ನೆ ಸಂಖ್ಯೆ. ೭೧೦(೧೦೧೭)
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)
ಪ್ರಶ್ನೆ ಸಂಖ್ಯೆ ೭೧೧(೮೬೮)
(ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದೂಡಲಾಗಿದೆ)

Employees kept under suspension in Horticulture Department.

133. SRI. B. R. NEELAKANTAPPA (Tarikere).—Will the Minister of State for Horticulture be pleased to state :—

(a) the number of employees, kept under suspension in the Horticulture Department during the year 1985 (caste-wise information may be furnished) ;

(b) the final action taken after conducting enquiry with regard to the suspended employees ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು) —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೀಗಿದೆ ಸುಮಾರು ೩೩ ಜನರನ್ನು ಇದುವರೆವಿಗೂ ಅಮಾನತ್ತಿನಲ್ಲಿಟ್ಟಿದ್ದು ಇದರಲ್ಲಿ ಸುಮಾರು ೧೧ ಜನ ಒಕ್ಕಲಿಗರು, ೧೨ ಜನ ಲಿಂಗಾಯತರು ಹಾಗೂ ೨ ಕುರುಬರು ೨ ಕುಂಬಾರರು ಹಾಗೂ ಒಬ್ಬರು ಈಡಿಗರು ಒಬ್ಬರು ದೇವಾಂಗದವರು ಹಾಗೂ ಮೂರು ಜನ ಎಸ್.ಸಿ. ಜನಾಂಗಕ್ಕೆ ಸೇರಿದವರು. ಹಾಗೂ ಒಬ್ಬರು ಎಸ್.ಟಿ. ಜನಾಂಗಕ್ಕೆ ಸೇರಿದವರು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ತೋಟಗಾರಿಕೆ ಇಲಾಖೆ ಒಂದು ರೀತಿಯಲ್ಲಿ ಸೆಂಟ್ರಲ್ ಜೈಲ್ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಇಲಾಖೆಗೆ ಯಾರೇ ಹೋದರು ಸಹ ಅಲ್ಲಿನ ಅಧಿಕಾರಿಗಳು ಹೋದವರನ್ನು ಕಳ್ಳರನ್ನು ನೋಡಿದ ದೃಷ್ಟಿಯಲ್ಲಿ ನೋಡುತ್ತಾರೆ. ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ಸಹ ಅಲ್ಲಿನ ಮುಖ್ಯಾಧಿಕಾರಿ ಕಳ್ಳರ ದೃಷ್ಟಿಯಲ್ಲಿಯೇ ನೋಡುತ್ತಾರೆ. ನಾವು ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ನೋಡುವುದು ಸರಿಯಲ್ಲ. ಈ ಇಲಾಖೆಯಲ್ಲಿ ಮೇಲಾಧಿಕಾರಿಗಳಿಗೆ ಗೊತ್ತಿರುವುದು ಕೆಳಗಿನ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುವುದಂ ಇಲ್ಲ ಡಿಸ್‌ಮಿಸ್ ಮಾಡುವುದು, ಈ ಎರಡು ಮಾತ್ರ ಗೊತ್ತು. ಏನಾ ಕಾರಣ ಅಲ್ಲಿನ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿ ಸರ್ಕಾರದ ಹಣವನ್ನು ಸರಿಯಾದ ಕೆಲಸಕಾರ್ಯಗಳಿಗೆ ವಿನಿಯೋಗ ಮಾಡದೆ ವೃಥಾ ಪೋಲು ಮಾಡುತ್ತಿದ್ದಾರೆ. ತಾವೇ ನೋಡಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿಅಂಶಗಳನ್ನು. ಈ ಇಲಾಖೆಯ ಇತಿಹಾಸದಲ್ಲಿಯೇ ಯಾವತ್ತೂ ಇಷ್ಟೊಂದು ದೊಡ್ಡ ಪ್ರಮಾಣದ ಸಸ್‌ಪೆಂಡ್‌ಗಳು ಆಗಿರಲಿಲ್ಲ ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳಂ ಗಮನ ಹರಿಸಂತ್ತಾರೆಯೇ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ ಸುಮಾರು ೩೩ ಜನರನ್ನು ಅಮಾನತ್ತಿನಲ್ಲಿಟ್ಟಿದ್ದು ಅದರಲ್ಲಿ ಸುಮಾರು ೧೯ ಕೇಸ್‌ಗಳಲ್ಲಿ ಅಧಿಕಾರಿಗಳನ್ನು ನೇಮಕ ಮಾಡಿ ವಿಚಾರಣೆ ನಡೆಸುತ್ತಿದ್ದೇವೆ. ಇನ್ನು ಉಳಿದ ೧೩ ಕೇಸ್‌ಗಳಲ್ಲಿ ವಿಚಾರಣೆಯನ್ನು ಮಾಡುವುದಕ್ಕಾಗಿ ಬೇರೆ ಅಧಿಕಾರಿಗಳನ್ನು ನೇಮಕ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಏನು ನಮ್ಮ ಇಲಾಖೆಯ ಮೇಲೆ ಒಂದು ಗಂಭೀರವಾದಂಥ ಆಪಾದನೆಯನ್ನು ಮಾಡುತ್ತಿದ್ದಾರೆ ಆ ಬಗ್ಗೆ ನಾನು ಹೇಳುವುದೇನೆಂದರೆ ಯಾರು ಸರ್ಕಾರಿ ಸೇವೆಯನ್ನು ಸಲ್ಲಿಸುವಾಗ ಸರಿಯಾಗಿ ಅವರ ಕೆಲಸ ನಿರ್ವಹಣೆ ಮಾಡುವುದಿಲ್ಲವೋ ಮತ್ತು ಯಾರ ಮೇಲೆ ಭ್ರಷ್ಟಾಚಾರದ ಆಪಾದನೆಗಳು ಬರುತ್ತವೆಯೋ ಅಂತಹವರನ್ನು ನಾವು